# ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 04.03.2021ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2021ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡವಳಿಗಳು.

**ಉಪಸ್ಥಿತರು:**

**ಅನುಪಸ್ಥಿತರು:**

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗ ಸ್ವಾಗತಿಸಿದರು. ಸಭೆಯನ್ನು ಮುಂದುವರಿಸುವಂತೆ ಮಾನ್ಯ ಕುಲಪತಿಗಳನ್ನು ವಿನಂತಿಸಿದರು.

## ಪ್ರಾಸ್ತಾವಿಕ

ಮಾನ್ಯ ಕುಲಪತಿಗಳು ಈ ಕೆಳಗಿನ ಅಂಶಗಳನ್ನು ಸಭೆಗೆ ತಿಳಿಸಿದರು.

1. ನ್ಯಾಕ್ ಪೀರ್ ಟೀಮ್ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸಹಕರಿಸಿದ ಎಲ್ಲಾ ಮಾನ್ಯ ಸಿಂಡಿಕೇಟು ಸದಸ್ಯರುಗಳು, ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗ ಹಾಗೂ ಇತರರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಆದರೆ, ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ ನಿಂದ ದೊರೆತ ಗ್ರೇಡ್ ತೃಪ್ತಿಕರವಾಗಿಲ್ಲದಿರುವುದರಿಂದ ಈ ಬಗ್ಗೆ ಅಪೀಲ್ ಹೋಗುವ ವಿಚಾರವನ್ನು ಸಭೆಗೆ ತಿಳಿಸಿದರು.
2. ಮಂಗಳೂರು ವಿಶ್ವವಿದ್ಯಾನಿಲಯದ 39 ನೇ ವಾರ್ಷಿಕ ಘಟಿಕೋತ್ಸವವನ್ನು ಎಪ್ರಿಲ್ 2021ರ ಎರಡನೇ ವಾರದಲ್ಲಿ ನಡೆಸುವ ಸಾಧ್ಯತೆಯ ಬಗ್ಗೆ ತಿಳಿಸಿದರು.
3. ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ದಶಮಾನೋತ್ಸವ ಕಾರ್ಯಕ್ರಮವನ್ನು ನಡೆಸುವ ಬಗ್ಗೆ ಸದರಿ ಕೇಂದ್ರದ ದಾನಿಗಳಾದ ಡಾ. ಪಿ. ದಯಾನಂದ ಪೈ ಇವರನ್ನು ಭೇಟಿಯಾಗಿರುವ ವಿಷಯವನ್ನು ಸಭೆಗೆ ತಿಳಿಸುತ್ತಾ ಕಾರ್ಯಕ್ರಮ ನಡೆಸಲು ತಗಲುವ ವೆಚ್ಚವನ್ನು ಭರಿಸಲು ಸದರಿ ದಾನಿಗಳು ಸಿದ್ಧರಿರುವುದರಿಂದ ಅಂದಾಜುಪಟ್ಟಿಯನ್ನು ತಯಾರಿಸಿ ಮುಂದಿನ ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

## I. ನಡವಳಿಗಳ ದೃಢೀಕರಣ

**ದಿನಾಂಕ 25.01.2021 ರಂದು ನಡೆದ ಸಿಂಡಿಕೇಟಿನ 2021ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡವಳಿಯನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.**

ಇತರ ವಿಷಯಗಳ ಕ್ರಮ ಸಂಖ್ಯೆ 8ನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಲಾಯಿತು.

**8.** ವಿಶ್ವವಿದ್ಯಾನಿಲಯದಿಂದ ನೀಡಲಾಗುವ ಗೌರವ ಡಾಕ್ಟರೇಟ್ ಪದವಿಗೆ ಸಂಬಂಧಿಸಿ, ಮಂಗಳೂರು ವಿಶವಿದ್ಯಾನಿಲಯದಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಸಿಂಡಿಕೇಟು ಪರಿಶೀಲಿಸಿತು. ಸದರಿ ಅರ್ಜಿಗಳ ಪೈಕಿ ವಿವಿಧ ಕ್ಷೇತ್ರಗಳಿಂದ ಅರ್ಹರಾದ ವ್ಯಕ್ತಿಗಳನ್ನು ಆರಿಸಿ, ಈ ಬಗ್ಗೆ ಮುಂದಿನ ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಗೌರವ ಡಾಕ್ಟರೇಟ್ ಪದವಿಗೆ ಸಂಬಂಧಿಸಿ, ರಚಿಸಲಾಗುವ ತಜ್ಞರ ಸಮಿತಿಗೆ ಓರ್ವ ಕುಲಪತಿಗಳ ಹೆಸರನ್ನು ಮಂಗಳೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ಸಿಂಡಿಕೇಟು ಸರ್ವಾನುಮತದಿಂದ ನಾಮನಿರ್ದೇಶನ ಮಾಡಿತು.

## II. ಅನುಸರಣಾ ವರದಿಯ ಅನುಮೋದನೆ

**ದಿನಾಂಕ 30.12.2020 ರಂದು ನಡೆದ ಸಿಂಡಿಕೇಟಿನನ 2020ನೇ ಸಾಲಿನ ನಾಲ್ಕನೇ ವಿಶೇಷ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.**

**ಅನುಮೋದಿಸಲಾಯಿತು.**

## III. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು

**ಕಾರ್ಯಸೂಚಿ ಸಂಖ್ಯೆ:** **ಪರೀಕ್ಷಾಂಗ ಸಾ.ಸ.2:1 (2021)**

**ವಿಷಯ:** ಪಿಹೆಚ್ ಡಿ. ಪದವಿ ಪ್ರದಾನ ಮಾಡಿದ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅವಗಾಹನಿಸಲಾಯಿತು.

ಮುಂದುವರಿದು, ಸಂಶೋಧನೆಗೆ ಸಂಬಂಧಿಸಿ, ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.

1. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಕಾರ್ಯದ ಗುಣಮಟ್ಟವನ್ನು ಸುಧಾರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.
2. ಕನ್ನಡ ಭಾಷೆಯಲ್ಲಿ ಸಲ್ಲಿಸಿದ ಸಂಶೋಧನಾ ಪ್ರಬಂಧಗಳಿಗೂ ಕೂಡ plagiarism (ಕೃತಿಚೌರ್ಯ) ದ ನಿಯಮಗಳನ್ನು ಅಳವಡಿಸುವುದು.
3. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶಿಕ್ಷಕರುಗಳಿಂದ ತಾವು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಥವಾ ಇತರೇ ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನಾ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸುತ್ತಿದ್ದಲ್ಲಿ ಆ ವಿವರಗಳನ್ನು ಪಡೆಯಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಯಾವುದೇ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುತ್ತಿಲ್ಲದಿದ್ದರೆ ಸದರಿಯವರುಗಳಿಂದ ಶೂನ್ಯ ವರದಿಯನ್ನು ಪಡೆದುಕೊಳ್ಳುವುದು.
4. ಮಂಗಳೂರು ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳು, ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದ ಸಂಶೋಧನಾ ಕೇಂದ್ರಗಳು ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿ ಸಂಶೋಧನಾ ಕಾರ್ಯಕ್ಕೆ ನೋಂದಣಿ ಮಾಡಿಕೊಂಡಿರುವ ವಿದ್ಯಾರ್ಥಿಗಳ ವಿವರಗಳನ್ನು ಸಂಬಂಧಿತ ಮಾರ್ಗದರ್ಶಕರ ವಿವರಗಳೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಆಡಳಿತ ಸಾ.ಸ.2:2 (2021)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Chartered Accountant (ಲೇಖಪಾಲರು) ರ ಸೇವೆಯನ್ನು ಬಳಸಿಕೊಳ್ಳಲು ಸಮಿತಿ ರಚಿಸಿದ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಿ, ಕ್ರಮಸಂಖ್ಯೆ 6 ಮತ್ತು 7 ನಮೂದಿಸಿರುವ Chartered Accountant (ಲೇಖಪಾಲರು) ಗಳ ಸೇವೆಗಳನ್ನು ಅಗತ್ಯತೆಗನುಗುಣವಾಗಿ ಬಳಸಿಕೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಮುಂದುವರಿದು, Chartered Accountant (ಲೇಖಪಾಲರು) ಗಳ ಸೇವೆಗಳನ್ನು ಬಳಸಿಕೊಳ್ಳುವ ಸಂದರ್ಭದಲ್ಲಿ ಕಾರ್ಯವ್ಯಾಪ್ತಿಯನ್ನು ಸ್ಪಷ್ಟವಾಗಿ ನಮೂದಿಸಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಕಾನೂನು ಘಟಕ ಸಾ.ಸ.2:3 (2021)**

**ವಿಷಯ:** ಡಾ. ತಿಪ್ಪೇಸ್ವಾಮಿ ಇವರು ಮಂಗಳೂರು ವಿಶ್ವವಿದ್ಯಾನಿಲಯದ ವಿರುದ್ಧ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ 31446-2015ಗೆ ಸಂಬಂಧಿಸಿದ ಆಕ್ಷೇಪಣಾ ಹೇಳಿಕೆಗಳ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಕಾನೂನು ಘಟಕ ಸಾ.ಸ.2:4 (2021)**

**ವಿಷಯ:** ಡಾ. ತಿಪ್ಪೇಸ್ವಾಮಿ ಇವರು ಮಂಗಳೂರು ವಿಶ್ವವಿದ್ಯಾನಿಲಯದ ವಿರುದ್ಧ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ

1318-2016 (ಪಿಐಎಲ್)ಗೆ ಸಂಬಂಧಿಸಿದ ಆಕ್ಷೇಪಣಾ ಹೇಳಿಕೆಗಳ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ ಸಾ.ಸ.2:5 (2021)**

**ವಿಷಯ:** ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿ ಎಂ.ಎ. ಕನ್ನಡ ಸ್ನಾತಕೋತ್ತರ ಪದವಿಯ ದಿನಾಂಕ 25.09.2020 ರ ಪತ್ರಿಕೆ "KNH 553: ಕನ್ನಡ ಮತ್ತು ಕಂಪ್ಯೂಟರ್ ಬಳಕೆ ಪರೀಕ್ಷೆ" ನಡೆಯದಿರುವ ಬಗ್ಗೆ ಆಂತರಿಕಾ ವಿಚಾರಣಾ ಸಮಿತಿಯು ವಿಚಾರಣೆ ನಡೆಸಿ ದಂಡನೆಯನ್ನು ವಿಧಿಸಿದ ಬಗ್ಗೆ.

**ನಿರ್ಣಯ:** ಪ್ರೊ. ಅಭಯಕುಮಾರ್ ಕೆ., ಇವರಿಗೆ ವಿಧಿಸಲಾಗಿರುವ ದಂಡನೆಯನ್ನು ಸದರಿಯವರಿಂದ ವಸೂಲಾತಿ ಮಾಡುವಂತೆ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ ಸಾ.ಸ.2:6 (2021)**

**ವಿಷಯ:** ಡಾ. ಚಂದ್ರು ಹೆಗಡೆ ಸಹಾಯಕ ಪ್ರಾಧ್ಯಾಪಕರು ಗಣಿತಶಾಸ್ತ್ರ ವಿಭಾಗ, ಇವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೇಮಕಾತಿಯಾಗುವ ಮೊದಲು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸಲ್ಲಿಸಿದ ಸೇವೆಯನ್ನು ಕೆರಿಯರ್ ಅಡ್ವಾನ್ಸ್ ಮೆಂಟ್ ಸ್ಕೀಂನಲ್ಲಿ ಪದೋನ್ನತಿಗೆ ಪರಿಗಣಿಸುವ ಬಗ್ಗೆ

**ನಿರ್ಣಯ:** ಸದರಿಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸಲ್ಲಿಸಿದ ಸೇವೆಯ ವಿವರಗಳನ್ನು ಪರಿಶೀಲಿಸಿ, ಸದರಿ ಅವಧಿಯನ್ನು ಕೆರಿಯರ್ ಅಡ್ವಾನ್ಸ್ ಮೆಂಟ್ ಸ್ಕೀಂನಲ್ಲಿ ಪದೋನ್ನತಿಗೆ ಪರಿಗಣಿಸುವ ಅಧಿಕಾರವನ್ನು ಕುಲಸಚಿವರಿಗೆ ನೀಡಲಾಯಿತು. ಮಾಹಿತಿಯನ್ನು ಸಿಂಡಿಕೇಟಿನ ಗಮನಕ್ಕೆ ತರುವಂತೆ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ ಸಾ.ಸ.2:7 (2021)**

**ವಿಷಯ:** ತುಮಕೂರು ವಿಶ್ವವಿದ್ಯಾನಿಲಯ ಇಲ್ಲಿನ ಕುಲಸಚಿವರು (ಪರೀಕ್ಷಾಂಗ)ರಾಗಿ ಪ್ರೊ. ನಿರ್ಮಲ್‌ರಾಜು, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ವಿಭಾಗ ಇವರ ನೇಮಕಾತಿ ಕರ್ತವ್ಯದಿಂದ ಬಿಡುಗಡೆ ಹಾಗೂ ಹುದ್ದೆಯ ಹಕ್ಕು ಸ್ವಾಮ್ಯ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.
ಕಾರ್ಯಸೂಚಿಯ ಪಾರಾ 1ರ ಆರನೇ ಸಾಲಿನಲ್ಲಿ ನಮೂದಿಸಲಾದ ದಿನಾಂಕ 11.02.2020 ನ್ನು ಸರಿಪಡಿಸುವಂತೆ ಸಂಬಂಧಿತರಿಗೆ ಸೂಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟ್ ಸಾ.ಸ.2:8 (2021)**

**ವಿಷಯ:** ಶ್ರೀ ರವಿಚಂದ್ರ ಪಿ. ಎಂ., ಸಿಂಡಿಕೇಟು ಸದಸ್ಯರು - ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು

**ನಿರ್ಣಯ:** ಶ್ರೀ ಗೋಕರ್ಣನಾಥೇಶ್ವರ ಬಿ.ಎಡ್. ಕಾಲೇಜು, ಮಂಗಳೂರು ಇಲ್ಲಿನ ಪ್ರಾಂಶುಪಾಲರ ನೇಮಕಾತಿಗೆ ಸಂಬಂಧಿಸಿ, ಸದರಿ ಕಾಲೇಜಿನ ಆಡಳಿತ ಮಂಡಳಿಯಿಂದ ಸೂಕ್ತ ವಿವರಣೆಯನ್ನು ಪಡೆಯಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟ್ ಸಾ.ಸ.2:9 (2021)**

**ವಿಷಯ:** ಪ್ರೊ. ಬಿ. ಉದಯ, ಡೀನರು, ಕಲಾ ನಿಕಾಯ, ಹಾಗೂ ಸಿಂಡಿಕೇಟು ಸದಸ್ಯರು -

ಇವರು ಸಲ್ಲಿಸಿರುವ ಕಾರ್ಯಸೂಚಿ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶಿಕ್ಷಕರುಗಳು ತಮ್ಮ ಕೃತಿಗಳನ್ನು ಪ್ರಕಟಿಸಿ, ಸದರಿ ಕೃತಿಗಳು ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳಿಗೆ ಪರಾಮರ್ಶನೆಗಾಗಿ ಲಭ್ಯವಾಗುವಂತೆ ಕ್ರಮ ವಹಿಸಲು ಶಿಕ್ಷಕರುಗಳಿಗೆ ತಿಳಿಸಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟ್ ಸಾ.ಸ.2:10 (2021)**

**ವಿಷಯ:** ಡಾ. ಎನ್. ಪಿ. ನಾರಾಯಣ ಶೆಟ್ಟಿ, ಸಿಂಡಿಕೇಟ್ ಸದಸ್ಯರು - ಇವರು ಸಲ್ಲಿಸಿರುವ ಪ್ರಸ್ತಾವನೆ - ಮಂಗಳೂರು ವಿ.ವಿ.ಯ ಪರೀಕ್ಷಾಂಗ ವಿಭಾಗದಲ್ಲಿ ವಿವಿಧ ಪರೀಕ್ಷಾ ಸಂಬಂಧಿಸಿದಂತೆ ನೀಡಲಾಗುವ ಆದೇಶಗಳು ಮತ್ತು ಸುತ್ತೋಲೆಗಳಿಗೆ ಅನಧಿಕೃತವಾಗಿ ಹಸ್ತಾಕ್ಷರ ಮಾಡಲು ಅನುಮತಿ ನೀಡಿದ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು. ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದ ಕೆಲಸಕಾರ್ಯಗಳನ್ನು ಗೌಪ್ಯತೆಯಿಂದ ನಡೆಸುತ್ತಿರುವುದರಿಂದ ಈ ಬಗೆಗಿನ ಅಧಿಸೂಚನೆಗಳು, ಸಭಾಸೂಚನಾ ಪತ್ರಗಳು ಮತ್ತು ಇತರೇ ಮಾಹಿತಿಗಳನ್ನು ಸಂಬಂಧಿತ ಶಿಕ್ಷಕರನ್ನು ಹೊರತುಪಡಿಸಿ, ಇತರರಿಗೆ ನೀಡುತ್ತಿರಲಿಲ್ಲ ಎಂದು ಕುಲಸಚಿವರು (ಪರೀಕ್ಷಾಂಗ) ಇವರು ಸಭೆಗೆ ತಿಳಿಸಿದರು. ಆದರೆ, ಈ ಕೆಳಗಿನ ಕಾರಣಗಳಿಗಾಗಿ ಪ್ರಾಂಶುಪಾಲರುಗಳಿಗೆ ಪರೀಕ್ಷಾ ಮಂಡಳಿ ಅಧ್ಯಕ್ಷರು ಮತ್ತು ಸದಸ್ಯರ ಮಾಹಿತಿಯ ಅಗತ್ಯವಿರುವುದರಿಂದ ಸದರಿ ಸಂಬಂಧಿತ ಪ್ರಾಂಶುಪಾಲರಿಗೆ ಮಾತ್ರ ಈ ಬಗೆಗಿನ ಮಾಹಿತಿಯನ್ನು ನೀಡಬಹುದೆಂಬುದಾಗಿ ನಿರ್ಧರಿಸಿ, ಸದರಿ ಪ್ರಾಂಶುಪಾಲರು ಮಾಹಿತಿಯ ಗೌಪ್ಯತೆಯನ್ನು ಕಾಪಾಡಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

1. ತಮ್ಮ ಕಾಲೇಜಿನಲ್ಲಿ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿ, ನಡೆಸಲ್ಪಡುತ್ತಿರುವ ಸಭೆಗಳ ವಿವರಗಳು
2. ತಮ್ಮ ಕಾಲೇಜಿನ ಶಿಕ್ಷಕರನ್ನು ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದ ಕೆಲಸಗಳಿಗೆ ನಿಯೋಜಿಸುವ ಸಂದರ್ಭದಲ್ಲಿ, ವಿಶೇಷ ಸಾಂದರ್ಭಿಕ ರಜೆ ಮಂಜೂರಾತಿಗಾಗಿ.

ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವುದಾಗಿ ಕುಲಸಚಿವರು (ಪರೀಕ್ಷಾಂಗ) ಇವರು ತಿಳಿಸಿದರು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟ್ ಸಾ.ಸ.2:11 (2021)**

**ವಿಷಯ:** ಶ್ರೀ ರಮೇಶ್ ಕೆ., ಸಿಂಡಿಕೇಟು ಸದಸ್ಯರು – ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು.

**ನಿರ್ಣಯ:** ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿರುವ ಮಾಸ್ಟರ್ ಪ್ಲಾನ್‌ನ್ನು ಪುನರಾವಲೋಕಿಸಲು ಎಲ್ಲಾ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು, ಘಟಕ ಕಾಲೇಜುಗಳ ಪ್ರಾಂಶುಪಾಲರುಗಳು, ಕಾರ್ಯಕಾರಿ ಅಭಿಯಂತರರು, ಆಡಳಿತ ಅಧಿಕಾರಿಗಳು, ಹಳೆವಿದ್ಯಾರ್ಥಿ ಸಂಘ, ಅಭಿವೃದ್ಧಿ ಸಮಿತಿ, NITK ಮತ್ತು ಕೈಡ್ಮೈ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ ಮುಂದಿನ ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ** **ಸಿಂಡಿಕೇಟ್ ಸಾ.ಸ.2:12 (2021)**

**ಸಂಖ್ಯೆ:**

**ವಿಷಯ:** ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟ್ ಸದಸ್ಯರು – ಇವರು ಸಲ್ಲಿಸಿರುವ ಪ್ರಸ್ತಾವನೆ: Request to take up for discussion the committee report submitted by Sri Vivekananda Paniyala on Transfers from UG to PG ಕುರಿತು.

**ನಿರ್ಣಯ:** ಪ್ರಸ್ತಾವನೆಯನ್ನು ಕೈಗೆತ್ತಿಕೊಳ್ಳಲಾಯಿತು. ಆದರೆ, ವರ್ಗಾವಣೆಗೆ ಸಂಬಂಧಿಸಿ, ರಚಿಸಲಾದ ಸಮಿತಿಯ ವರದಿಯು ಸ್ವೀಕೃತವಾದ ಬಳಿಕ ಈ ಬಗ್ಗೆ ಚರ್ಚಿಸಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟ್ ಸಾ.ಸ.2:13 (2021)**

**ವಿಷಯ:** ಶೈಕ್ಷಣಿಕ ವರ್ಷ 2020-21ನೇ ಸಾಲಿಗೆ ಸಾವಯವ ರಸಾಯನಶಾಸ್ತ್ರ ಕಾರ್ಯಕ್ರಮಕ್ಕೆ ನಿಗದಿಪಡಿಸಿರುವ ಸಾಮಾನ್ಯ ವರ್ಗದ ವಿಶೇಷ ಶುಲ್ಕ (Special Fee) ವನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ ಸಾ.ಸ.2:14 (2021)**

**ವಿಷಯ:** ಪ್ರೊ. ವಿ. ಗಿರೀಶ್ ಚಂದ್ರ, ಪ್ರಾಧ್ಯಾಪಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಬೆಂಗಳೂರು ಇವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಲ್ಲಿಸಿದ ಅವಧಿಯ ಪಿಂಚಣಿ ವಂತಿಗೆಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿಗೆ ವರ್ಗಾಯಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ ಸಾ.ಸ.2:15 (2021)**

**ವಿಷಯ:** ದಿನಾಂಕ 01.01.2016ರ ಪರಿಷ್ಕೃತ ಯುಜಿಸಿ 7ನೇ ವೇತನಶ್ರೇಣಿ / ಸಂಬಂಧಿಸಿದ ಆದೇಶಗಳನ್ವಯ ಪರಿಷ್ಕೃತ ವೇತನ ಶ್ರೇಣಿಯ ವಿವಿಧ ಸೌಲಭ್ಯಗಳನ್ನು ವಿಸ್ತರಿಸಲು ರಚಿಸಿದ ಕರಡು ಪರಿನಿಯಮ / ಅನುಶಾಸನವನ್ನು ತಿದ್ದುಪಡಿ ಮಾಡಿ ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು. ಕರಡು ಪರಿನಿಯಮವನ್ನು ಸರ್ಕಾರಕ್ಕೆ ಕಳುಹಿಸಲು ಸೂಕ್ತ ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ ಸಾ.ಸ.2:16 (2021)**

**ವಿಷಯ:** ಸ್ನಾತಕೋತ್ತರ ಭೂಗೋಳಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಸ್ಥಾಪನೆ ಬಗ್ಗೆ ರಚಿಸಿದ ಕರಡು ಪರಿನಿಯಮದ ಅನುಮೋದನೆ ಕುರಿತು.

**ನಿರ್ಣಯ:** ಅನುಮೋದಿಸಲಾಯಿತು. ಕರಡು ಪರಿನಿಯಮವನ್ನು ಸರ್ಕಾರಕ್ಕೆ ಕಳುಹಿಸಲು ಸೂಕ್ತ ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ ಸಾ.ಸ.2:17 (2021)**

**ವಿಷಯ:** ಸ್ನಾತಕೋತ್ತರ ವೈದ್ಯಕೀಯ ಭೌತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಸ್ಥಾಪನೆ ಬಗ್ಗೆ ರಚಿಸಿದ ಕರಡು ಪರಿನಿಯಮದ ಅನುಮೋದನೆ ಕುರಿತು.

**ನಿರ್ಣಯ:** ಅನುಮೋದಿಸಲಾಯಿತು. ಕರಡು ಪರಿನಿಯಮವನ್ನು ಸರ್ಕಾರಕ್ಕೆ ಕಳುಹಿಸಲು ಸೂಕ್ತ ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.2:18 (2021)**
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ದಿವಂಗತ ಶ್ರೀ ಕಿಶೋರ್ ಕುಮಾರ್ ಶೆಟ್ಟಿ ಇವರ ಗೌರವಾರ್ಥ ಚಿನ್ನದ ಪದಕ ದತ್ತಿನಿಧಿ ಸ್ಥಾಪನೆ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಇಡಿ ಸಾ.ಸ.2:19 (2021)**
**ವಿಷಯ:** ಉಡುಪಿ ಜಿಲ್ಲೆಯ ಬೆಳಪುವಿನಲ್ಲಿ ಅತ್ಯಾಧುನಿಕ ಸಂಶೋಧನಾ ಕೇಂದ್ರ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ ಆವರಣದ ವಿವಿಧ ಕಟ್ಟಡಗಳ ಕಾಮಗಾರಿ: ಬೆಳಪುನಲ್ಲಿರುವ ಕಟ್ಟಡ ಕಾಮಗಾರಿಗೆ ಮೂರನೇ ಹಂತದ ರೇವಣಿ ಅನುದಾನವನ್ನು ಕರ್ನಾಟಕ ಗೃಹಮಂಡಳಿಗೆ ಬಿಡುಗಡೆ ಮಾಡುವ ಬಗ್ಗೆ.
**ನಿರ್ಣಯ:** ದಿನಾಂಕ 05.02.2021ರಂದು ನಡೆದ ಜಂಟಿ ಪರಿಶೀಲನಾ ಸಮಿತಿಯ ವರದಿಯ ಶಿಫಾರಸ್ಸಿನ ಆಧಾರದ ಮೇಲೆ ಈ ಕೆಳಗಿನ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಂಡು ಮೂರನೇ ಹಂತದ ರೇವಣಿ ಅನುದಾನವನ್ನು ಕರ್ನಾಟಕ ಗೃಹಮಂಡಳಿಗೆ ಬಿಡುಗಡೆ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.
*"ಕಾಮಗಾರಿಗೆ ಪ್ರಸ್ತುತ ಜಾರಿಯಲ್ಲಿರುವ ಕಾನೂನಿನ ಅನ್ವಯ ಗುತ್ತಿಗೆಯನ್ನು ನೀಡಿದ್ದು, ಶಾಸನಾತ್ಮಕವಾಗಿ ಮತ್ತು ತಾಂತ್ರಿಕವಾಗಿ ನಿಯಮಾನುಸಾರ ಕಾಮಗಾರಿಯನ್ನು ನಿರ್ವಹಿಸಲಾಗಿದೆ ಮತ್ತು ಗುಣಮಟ್ಟವನ್ನು ಕಾಯ್ದುಕೊಳ್ಳಲಾಗಿದೆ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಹಿತಾಸಕ್ತಿಯನ್ನು ಕಾಪಾಡಲಾಗಿದೆ ಎಂದು ನಾನು ಈ ಮೂಲಕ ಅಧಿಕಾರಿಯ ನೆಲೆಯಲ್ಲಿ ಪ್ರಮಾಣೀಕರಿಸಿ ದೃಢೀಕರಿಸುತ್ತೇನೆ ಮತ್ತು ಈ ಕುರಿತು ಸಂಪೂರ್ಣ ಹೊಣೆಗಾರಿಕೆಯನ್ನು ಹೊತ್ತುಕೊಳ್ಳುತ್ತೇನೆ".*

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.2:20 (2021)**
**ವಿಷಯ:** ಸಂತ ಜಾರ್ಜ್ ಪದವಿ ಕಾಲೇಜು, ನೆಲ್ಯಾಡಿ ಇಲ್ಲಿನ ಕಟ್ಟಡದ ಬಾಡಿಗೆ ಪಾವತಿ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು.
**ಕಾರ್ಯಸೂಚಿ ಸಂಖ್ಯೆ:** **ಎಸಿಸಿ ಸಾ.ಸ.2:21 (2021)**
**ವಿಷಯ:** ಕಾಲೇಜುಗಳು/ವಿದ್ಯಾಸಂಸ್ಥೆಗಳ ತಾತ್ಕಾಲಿಕ ಸಂಯೋಜನೆಯ ಅನುಶಾಸನದ ಪರಿಷ್ಕರಣೆಯ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು. ಪರಿಷ್ಕೃತ ಅನುಶಾಸನವನ್ನು ಸರ್ಕಾರಕ್ಕೆ ಕಳುಹಿಸಲು ಸೂಕ್ತ ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ ಸಾ.ಸ.2:22 (2021)**
**ವಿಷಯ:** ಡಾ. ಎಂ. ಜಯಶಂಕರ, ಸೂಕ್ಷ್ಮಾಣುಜೀವವಿಜ್ಞಾನ ವಿಭಾಗ, ಚಿಕ್ಕ ಅಳುವಾರ ಇವರಿಗೆ ಡಿ.ಎಸ್ಸಿ. (Doctor of Science) ಪದವಿ ನೀಡುವ ಬಗ್ಗೆ.
**ನಿರ್ಣಯ:** ವಿಸ್ತೃತವಾದ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮರು

ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ ಸಾ.ಸ.2:23 (2021)**

**ವಿಷಯ:** ಡಾ. ರಾಜಶ್ರೀ ಎಸ್. ಕಿಣಿ ಇವರಿಗೆ ಪಿಹೆಚ್‌ಡಿ. ಪದವಿ ಪಡೆದ ನಂತರ ಕೋರ್ಸ್ ವರ್ಕ್ ಮಾಡಲು ಅವಕಾಶ ನೀಡುವ ಬಗ್ಗೆ.

**ನಿರ್ಣಯ:** ಕೋರ್ಸ್‌ವರ್ಕ್ ಮಾಡದೇ ಪಿಹೆಚ್.ಡಿ. ಪದವಿ ಪಡೆದಿರುವ ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರಸ್ತುತ ಯುಜಿಸಿ ನಿಯಮಾವಳಿಯಲ್ಲಿ ಕೋರ್ಸ್‌ವರ್ಕ್‌ನಿಂದ ವಿನಾಯಿತಿ ನೀಡಿರುವುದರಿಂದ ಸದರಿಯವರಿಗೆ ಕೋರ್ಸ್ ವರ್ಕ್‌ನ ಅಗತ್ಯವಿಲ್ಲದಿರುವುದಿಲ್ಲ. ಆದುದರಿಂದ ಈ ವಿಷಯವನ್ನು ಸದರಿಯವರಿಗೆ ತಿಳಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಲಾಯಿತು. ಆದಾಗ್ಯೂ ಸದರಿಯವರು ಅಪೇಕ್ಷಿಸಿದಲ್ಲಿ ಸದರಿ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಈ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ (one time measure only) ವಿದ್ಯಾರ್ಥಿನಿಯ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ ಕೋರ್ಸುವರ್ಕ್ ಮಾಡಲು ಅವಕಾಶ ನೀಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ ಸಾ.ಸ.2:24 (2021)**

**ವಿಷಯ:** ಶೈಕ್ಷಣಿಕ ವರ್ಷ 2020-21 ನೇ ಸಾಲಿನಿಂದ ಪಿಹೆಚ್ ಡಿ. ಕಾರ್ಯಕ್ರಮಗಳ ಸೀಟು ಹಂಚಿಕೆಗೆ Block Period System ನ್ನು ಅನುಸರಿಸುವ ಬಗ್ಗೆ

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ ಸಾ.ಸ.2:25 (2021)**

**ವಿಷಯ:** ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ) ಮಂಗಳೂರು ಸಂಸ್ಥೆಯನ್ನು ಪಿಹೆಚ್‌ಡಿ ವ್ಯಾಸಂಗಕ್ಕೆ ಸಂಶೋಧನಾ ಕೇಂದ್ರುವನ್ನಾಗಿ ಮಾನ್ಯತೆ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ ಸಾ.ಸ.2:26 (2021)**

**ವಿಷಯ:** ಡಾ. ಶಿವಾನಂದ ನಾಯಕ್, ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ, ಇವರ ಡಿ.ಎಸ್ಸಿ (Doctor of Science) ಪದವಿ ನೀಡುವ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಅಧ್ಯಕ್ಷರು ಸಲ್ಲಿಸಿರುವ ಪರೀಕ್ಷಕರ ಪಟ್ಟಿಯಿಂದ ಪರೀಕ್ಷಕರನ್ನು ಆಯ್ಕೆ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟು ಸಾ.ಸ.2:27 (2021)**

**ವಿಷಯ:** ಪ್ರೊ. ಕರುಣಾಕರ್ ಎ. ಕೋಟೆಗಾರ್, ಸಿಂಡಿಕೇಟು ಸದಸ್ಯರು - ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು.

1. **Review of NAAC peer team visit**

**ನಿರ್ಣಯ:** ಈ ಬಗ್ಗೆ ಪ್ರೊ. ಕಿಶೋರಿ ನಾಯಕ್ ಕೆ., ನಿರ್ದೇಶಕರು, ಐ.ಕ್ಯೂ.ಎ.ಸಿ. ಇವರು ನ್ಯಾಕ್ ಪೀರ್ ಟೀಮ್ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ ಸಂದರ್ಭ ಮತ್ತು ಸಮಿತಿಯು ನೀಡಿರುವ ವರದಿಯ ವಿವರಗಳನ್ನು ಸಭೆಗೆ ಸವಿಸ್ತಾರವಾಗಿ ವಿವರಿಸಿದರು.

2. **Reducing printing paper consumptions and lowering the cost of postage by adopting online communication.**

**ನಿರ್ಣಯ:** ವಿಶ್ವವಿದ್ಯಾನಿಲಯದ ಆಡಳಿತವನ್ನು ಪ್ರಸ್ತುತ e-governance ಮೂಲಕ ನಡೆಸುತ್ತಿದ್ದು, ಕಾಗದದ ಬಳಕೆಯು ಈಗಾಗಲೇ ಕಡಿಮೆಯಾಗಿರುತ್ತದೆ ಎಂಬ ಮಾಹಿತಿಯನ್ನು ಕುಲಸಚಿವರು ಸಭೆಗೆ ನೀಡಿದರು. ಆದಾಗ್ಯೂ ಕಾಗಗದ ಬಳಕೆಯನ್ನು ಮಿತಿಗೊಳಿಸಲು ಪ್ರತಿ ವಿಭಾಗಗಳಿಗೆ ಸೂಚಿಸಿ, Paper Consumption target ಮೂಲಕ ಅತಿ ಕಡಿಮೆ ಕಾಗದ ಬಳಸುತ್ತಿರುವ ವಿಭಾಗಗಳನ್ನು ಗುರುತಿಸಿ ಪ್ರೋತ್ಸಾಹಿಸಬಹುದೆಂಬುದಾಗಿ ಸಭೆಯು ಅಭಿಪ್ರಾಯ ಪಟ್ಟಿತು. Green Audit ನ್ನು ಕಡ್ಡಾಯವಾಗಿ ವಿಶ್ವವಿದ್ಯಾನಿಲಯದಲ್ಲಿ ನಡೆಸಬೇಕೆಂಬುದಾಗಿ ನಿರ್ಣಯಿಸಲಾಯಿತು.

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಸಿಬ್ಬಂದಿ ಸಾ.ಸ.2:28 (2021)** |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ ಸಹಾಯಕ ಅಭಿಯಂತರ (A.E.) ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿಯಂತ್ರಿಸುವ ಪರಿನಿಯಮದ ಅನುಮೋದನೆ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಡಿಇವಿ ಸಾ.ಸ.2:29 (2021)** |
| **ವಿಷಯ:** | ದೂರ ಶಿಕ್ಷಣ ಕೇಂದ್ರದ ಶೈಕ್ಷಣಿಕ ಮಂಡಳಿ ಸಭೆಯ ಶಿಫಾರಸ್ಸುಗಳಿಗೆ ಅನುಮೋದನೆ ಪಡೆಯುವ ಬಗ್ಗೆ. |
| **ನಿರ್ಣಯ:** | ಸದರಿ ಪ್ರಸ್ತಾವನೆಯನ್ನು ವಿಶೇಷ ನೆಲೆಯಲ್ಲಿ ಪರಿಗಣಿಸಿ ಈ ಶೈಕ್ಷಣಿಕ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಇಡಿ ಸಾ.ಸ.2:30 (2021)** |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ವಿಜ್ಞಾನ ಸಂಕೀರ್ಣ ಕಟ್ಟಡದ 2ನೇ ಅಂತಸ್ತಿನಲ್ಲಿರುವ ಕಂಪ್ಯೂಟರ್ ಸಾಯನ್ಸ್ ವಿಭಾಗದ ಅಧ್ಯಕ್ಷರ / ಕಛೇರಿ ಕೊಠಡಿಗೆ ಅಗತ್ಯದ ದುರಸ್ತಿ - ಟೆಂಡರ್ ಅಂಗೀಕರಿಸುವ ಬಗ್ಗೆ. |
| **ನಿರ್ಣಯ:** | ದಿನಾಂಕ 26.02.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.<br>ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಇಡಿ ಸಾ.ಸ.2:31 (2021)** |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ವಿಶ್ವಮಂಗಳ ವಿದ್ಯಾಸಂಸ್ಥೆಯಲ್ಲಿ ಶಾಲಾ ಕೊಠಡಿ ನಿರ್ಮಾಣ - ಟೆಂಡರ್ ಅನುಮೋದನೆ ಬಗ್ಗೆ. |
| **ನಿರ್ಣಯ:** | ದಿನಾಂಕ 26.02.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.<br>ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

**ಕಾರ್ಯಸೂಚಿ ಸಂಖ್ಯೆ:** **ಇಡಿ ಸಾ.ಸ.2:32 (2021)**

**ವಿಷಯ:** ಪ್ಯಾಕೇಜ್ ಕಾಮಗಾರಿಗಳ ಟೆಂಡರ್ ಮೊತ್ತವನ್ನು ಸಂಧಾನೀಕರಿಸುವ ಬಗ್ಗೆ (ಪ್ಯಾಕೇಜ್ ಸಂಖ್ಯೆ-4)

**ನಿರ್ಣಯ:** ದಿನಾಂಕ 26.02.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.
ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಇಡಿ ಸಾ.ಸ.2:33 (2021)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದ Botany ವಿಭಾಗದಲ್ಲಿ Research Lab ಹಾಗೂ Instrumentation lab museum ಹಾಗೂ Harbarium lab ಗಳ ಮಧ್ಯೆ ಅಲ್ಯುಮೀನಿಯಂ ವಿಭಾಜಕ ಅಳವಡಿಸುವ ಕಾಮಗಾರಿ - ಪರಿಷ್ಕೃತ ಅಂದಾಜುಪಟ್ಟಿ ಅನುಮೋದನೆ ಬಗ್ಗೆ ಪರಿಷ್ಕೃತ ಅಂದಾಜುಪಟ್ಟಿ ಮೊತ್ತ ರೂ.2,08,195.00

**ನಿರ್ಣಯ:** ದಿನಾಂಕ 26.02.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.
ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಇಡಿ ಸಾ.ಸ.2:34 (2021)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಮುಖ್ಯ ನೀರು ಸರಬರಾಜು ವ್ಯವಸ್ಥೆಯ ಮುನ್ನೂರು ಪಂಪ್ ಸ್ಥಾವರದಲ್ಲಿ 60 HP ಅಶ್ವ ಶಕ್ತಿಯ Vertical Turbine ನ್ನು Electrical Control Panel Board ಮತ್ತು FCMA starter panel ಸಮೇತ ಒದಗಿಸಿ ಅಳವಡಿಸುವುದು - ಟೆಂಡರ್ ಅಂಗೀಕರಿಸುವ ಬಗ್ಗೆ.

**ನಿರ್ಣಯ:** ದಿನಾಂಕ 26.02.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.
ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಇಡಿ ಸಾ.ಸ.2:35 (2021)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಅಂತರಾಷ್ಟ್ರೀಯ ವಿದ್ಯಾರ್ಥಿ ನಿಲಯ ಸಂಕೀರ್ಣ - ಮಲಿನ ನೀರು ಶುದ್ದೀಕರಣ ಸ್ಥಾವರ - (Sewage Water Treatment Plant (STP)) - ಅಂದಾಜು ಪಟ್ಟಿ ಅನುಮೋದನೆ ಬಗ್ಗೆ ಅಂದಾಜುಪಟ್ಟಿ ಮೊತ್ತ ರೂ.50.67 ಲಕ್ಷಗಳು.

**ನಿರ್ಣಯ:** ದಿನಾಂಕ 26.02.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.
ಮಲಿನ ನೀರು ಶುದ್ದೀಕರಣ ಸ್ಥಾವರದ ಯಂತ್ರೋಪಕರಣಗಳ ವಾರ್ಷಿಕ

ನಿರ್ವಹಣಾ ಅವಧಿಯು ಮುಕ್ತಾಯಗೊಳ್ಳುವುದರೊಳಗಾಗಿ ಸದರಿ ಯಂತ್ರದ ನಿರ್ವಹಣೆಯ ಬಗ್ಗೆ ವಿಶ್ವವಿದ್ಯಾನಿಲಯದ ತಾಂತ್ರಿಕ ಸಿಬ್ಬಂದಿಗಳಿಗೆ ತರಬೇತಿ ನೀಡುವುದು.

ಎಲ್ಲಾ ಷರತ್ತುಗಳನ್ನು ರೂ.100.00 (ರೂಪಾಯಿ ನೂರು ಮಾತ್ರ) ರ ಛಾಪಾ ಕಾಗದದಲ್ಲಿ ನಮೂದಿಸಿ ಗುತ್ತಿಗೆದಾರರಿಂದ ಪಡೆದುಕೊಳ್ಳುವುದು.

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಇಡಿ ಸಾ.ಸ.2:36 (2021)** |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಬಂಟ್ವಾಳ ತಾಲೂಕಿನ ಮುನ್ನೂರು ಗ್ರಾಮದಲ್ಲಿರುವ ನೀರು ಸರಬರಾಜು ಯೋಜನೆಯ ಸಿಬ್ಬಂದಿಗಳ ಪಾಳು ಬಿದ್ದಿರುವ ವಸತಿಗೃಹ ಹರಾಜು ಹಾಕುವ ಬಗ್ಗೆ ಸರ್ವೇ ವರದಿಗೆ ಅನುಮೋದನೆ ನೀಡುವ ಬಗ್ಗೆ. |
| **ನಿರ್ಣಯ:** | ದಿನಾಂಕ 26.02.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಇಡಿ ಸಾ.ಸ.2:37 (2021)** |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ದೈಹಿಕ ಶಿಕ್ಷಣ ವಿಭಾಗದ ವಿದ್ಯಾರ್ಥಿಗಳಿಗೆ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಕ್ರೀಡಾಪಟುಗಳ ಕ್ರೀಡಾ ಕೌಶಲ್ಯದ ತರಬೇತಿಗಾಗಿ ಉಪಯೋಗವಾಗುವ ಟೆನ್ನಿಸ್ ಕೋರ್ಟಿನ ಗೋಡೆಯ ನಿರ್ಮಾಣ ಕಾಮಗಾರಿ ಅಂದಾಜುಪಟ್ಟಿ ಮೊತ್ತ ರೂ.10.80 ಲಕ್ಷ. |
| **ನಿರ್ಣಯ:** | ದಿನಾಂಕ 26.02.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | **ಇಡಿ ಸಾ.ಸ.2:38 (2021)** |
| **ವಿಷಯ:** | Construction of asphalting approach road to Science Block at Jnana Kavery Campus, P.G. Center, Chikka Aluvar, Kodagu Dist. Pertaining to Mangalore University – ಅಂದಾಜು ಪಟ್ಟಿ ಮೊತ್ತ ರೂ.24.10 ಲಕ್ಷಗಳು |
| **ನಿರ್ಣಯ:** | ದಿನಾಂಕ 26.02.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಇಡಿ ಸಾ.ಸ.2:39 (2021)** |
| **ವಿಷಯ:** | Providing and laying interlock and kerb stone in front of new Girls Hostel in F.M.K.M.C. College, Madikeri, Kodagu Dist.- ಕಾಲಾವಧಿ ವಿಸ್ತರಣೆ ಅನುಮೋದನೆ ಬಗ್ಗೆ. |
| **ನಿರ್ಣಯ:** | ದಿನಾಂಕ 26.02.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.<br>ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಇಡಿ ಸಾ.ಸ.2:40 (2021)** |
| **ವಿಷಯ:** | Construction of Shree Narayana Guru Adhyayana Peeta Building at Mangalore University Campus, Mangalagangothri – ವ್ಯತ್ಯಾಸ ಅಂಶಗಳಾದ ಹೆಚ್ಚುವರಿ ಪರಿಮಾಣ ಮೊತ್ತ (Excess Qty., -Work Slip) ಹಾಗೂ |

ಹೆಚ್ಚುವರಿ ಐಟಂ ಮೊತ್ತಗಳಿಗೆ (EIRL) ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 26.02.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.
ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಇಡಿ ಸಾ.ಸ.2:41 (2021)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ತರಗತಿ ಕೊಠಡಿಗಳ ಸಂಕೀರ್ಣ (Lecture Complex) ದ ಮೊದಲ ಮತ್ತು ಎರಡನೇ ಅಂತಸ್ತಿನ ಸೆಮಿನಾರ್ ಹಾಲ್ಗಳ ಕಿಟಕಿಗಳಿಗೆ Vertical blinds ಅಳವಡಿಸಿರುವ ಕಾಮಗಾರಿಯ ಸಂಧಾನಿತ ಪರಿಷ್ಕೃತ ಬಿಲ್ಲಿನ ಮೊತ್ತಕ್ಕೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 26.02.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.
ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಇಡಿ ಸಾ.ಸ.2:42 (2021)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಅಧೀನಕ್ಕೊಳಪಟ್ಟ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಇಲ್ಲಿ ನಿರ್ಮಾಣಗೊಂಡಿರುವ ವಿಜ್ಞಾನ ವಿಭಾಗ ಕಟ್ಟಡದ (ಉತ್ತರ ಭಾಗ) – ಅಂತಿಮ ಹೆಚ್ಚುವರಿ ಪರಿಮಾಣ ಮೊತ್ತ (Excess Qty., - Workslip), ಹೆಚ್ಚುವರಿ ಐಟಂ ಮೊತ್ತ (EIRL) ಹಾಗೂ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತ (Revised Estimate) ಕ್ಕೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.2:43 (2021)**

**ವಿಷಯ:** ದೂರಶಿಕ್ಷಣ ಕೇಂದ್ರದ 2020-21ನೇ ಸಾಲಿನ ವಿವಿಧ ಕೋರ್ಸುಗಳ ಅಧ್ಯಯನ ಸಾಮಾಗ್ರಿಗಳ ಜೆರಾಕ್ಸ್ ಹಾಗೂ ಬೈಂಡಿಂಗ್ ಕಾರ್ಯದ ಟೆಂಡರು ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 01.03.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.2:44 (2021)**

**ವಿಷಯ:** ವಿಶ್ವವಿದ್ಯಾನಿಲಯ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಔಷಧಿ/ಔಷಧೀಯ ವಸ್ತುಗಳನ್ನು ಖರೀದಿಸುವ ಬಗ್ಗೆ.

**ನಿರ್ಣಯ:** ದಿನಾಂಕ 01.03.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ** **ಡಿಇವಿ ಸಾ.ಸ.2:45 (2021)**

**ಸಂಖ್ಯೆ:**

**ವಿಷಯ:** CAREER – ಕೇಂದ್ರದ HpGe detector ಉಪಕರಣಕ್ಕೆ ಅಗತ್ಯವಿರುವ Liquid Nitrogen ನ್ನು ಖರೀದಿಸಲು ಮಂಜೂರಾತಿ ನೀಡುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 01.03.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಪರೀಕ್ಷಾಂಗ ಸಾ.ಸ.2:46 (2021)**

**ವಿಷಯ:** MSIL ರವರಿಂದ ಪ್ರಿ ಪ್ರಿಂಟೆಡ್ ಪದವಿ ಪ್ರಮಾಣ ಪತ್ರ ಖರೀದಿಸುವ ಬಗ್ಗೆ.

**ನಿರ್ಣಯ:** ದಿನಾಂಕ 01.03.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಇತರ ವಿಷಯಗಳು:**

1. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕೈಗೊಳ್ಳಲಾಗುತ್ತಿರುವ ಎಲ್ಲಾ ಕಾಮಗಾರಿಗಳಿಗೆ ಸಂಬಂಧಿಸಿ, ಈ ಕೆಳಗಿನ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರು ನೀಡಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.
   ***"ಕಾಮಗಾರಿಗೆ ಪ್ರಸ್ತುತ ಜಾರಿಯಲ್ಲಿರುವ ಕಾನೂನಿನ ಅನ್ವಯ ಗುತ್ತಿಗೆಯನ್ನು ನೀಡಿದ್ದು, ಶಾಸನಾತ್ಮಕವಾಗಿ ಮತ್ತು ತಾಂತ್ರಿಕವಾಗಿ ನಿಯಮಾನುಸಾರ ಕಾಮಗಾರಿಯನ್ನು ನಿರ್ವಹಿಸಲಾಗಿದೆ ಮತ್ತು ಗುಣಮಟ್ಟವನ್ನು ಕಾಯ್ದುಕೊಳ್ಳಲಾಗಿದೆ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಹಿತಾಸಕ್ತಿಯನ್ನು ಕಾಪಾಡಲಾಗಿದೆ ಎಂದು ನಾನು ಈ ಮೂಲಕ ಅಧಿಕಾರಿಯ ನೆಲೆಯಲ್ಲಿ ಪ್ರಮಾಣೀಕರಿಸಿ ದೃಢೀಕರಿಸುತ್ತೇನೆ ಮತ್ತು ಈ ಕುರಿತು ಸಂಪೂರ್ಣ ಹೊಣೆಗಾರಿಕೆಯನ್ನು ಹೊತ್ತುಕೊಳ್ಳುತ್ತೇನೆ".***
2. ಮುಂದಿನ ಸಿಂಡಿಕೇಟು ಸಭೆಗಳನ್ನು ಪ್ರತಿ ತಿಂಗಳ ಮೂರನೇ ಶನಿವಾರ ನಡೆಸಲು ಕ್ರಮ ಕೈಗೊಳ್ಳುವುದು.
3. ಸಿಂಡಿಕೇಟು ಸಭೆಗಳ 15 ದಿನಗಳಿಗೆ ಮುಂಚಿತವಾಗಿ ಖರೀದಿ ಸಮಿತಿ ಸಭೆ ಮತ್ತು ಕಟ್ಟಡ ಸಮಿತಿ ಸಭೆಗಳನ್ನು ನಡೆಸಲು ಕ್ರಮ ಕೈಗೊಳ್ಳುವುದು.
4. ಡಾ. ಉದಯಕುಮಾರ್ ಎಂ.ಎ., ನಿಕಟಪೂರ್ವ ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರು ತಮ್ಮ ಫೇಸ್ ಬುಕ್ ಖಾತೆಯಲ್ಲಿ ಪ್ರಕಟಿಸಿದ ಹೇಳಿಕೆಗಳಿಗೆ ಸಂಬಂಧಿಸಿ, ಸದರಿಯವರಿಗೆ ನೀಡಿದ ನೋಟೀಸಿಗೆ ನೀಡಿರುವ ಸಮಜಾಯಿಷಿಕೆಗಳನ್ನು ಸಭೆಯ ಗಮನಕ್ಕೆ ತರಲಾಯಿತು.
5. ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಹೇಳಿಕೆ/ಅಭಿಪ್ರಾಯಗಳನ್ನು ಪ್ರಕಟಿಸುವ ಅಥವಾ ಹಂಚಿಕೊಳ್ಳುವ ಬಗ್ಗೆ ನಿರ್ಧಿಷ್ಟವಾದ ಮಾರ್ಗಸೂಚಿಗಳನ್ನು ತಯಾರಿಸಿ, ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು, ಸಿಬ್ಬಂದಿಗಳಿಗೆ ಈ ಬಗ್ಗೆ ಸುತ್ತೋಲೆ ಹೊರಡಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ Code of Conduct ನಲ್ಲಿ ಸಾಮಾಜಿಕ ಜಾಲತಾಣದ ಬಗ್ಗೆ ಉಲ್ಲೇಖಿಸಬೇಕೆಂಬುದಾಗಿಯೂ ನಿರ್ಣಯಿಸಲಾಯಿತು.
6. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಸಾಲಿನಿಂದ ಪರೀಕ್ಷಾ ಕಾರ್ಯವನ್ನು ಓಪನ್ ಸೋರ್ಸ್ ಸಾಫ್ಟ್ ವೇರ್ ಮೂಲಕ ನಡೆಸುತ್ತಿರುವುದರಿಂದ ಸದರಿ ಕಾರ್ಯಕ್ಕೆ ಅಗತ್ಯವಿರುವ ಮೂರು ಜನ ನುರಿತ ಕಂಪ್ಯೂಟರ್ ಸಿಬ್ಬಂದಿಗಳನ್ನು ಕುಲಸಚಿವರು (ಪರೀಕ್ಷಾಂಗ) ಇವರ ಕೋರಿಕೆಯ ಮೇರೆಗೆ ಪರೀಕ್ಷಾ ಗಣಕೀಕರಣ ಕಾರ್ಯದ ನಿರ್ವಹಣೆಗಾಗಿ ಬಳಸಿಕೊಳ್ಳಲು ಸಿಂಡಿಕೇಟು ಅನುಮತಿ ನೀಡಿತು.
7. ಮಂಗಳೂರು ವಿಶ್ವವಿದ್ಯಾನಿಲಯದ 39ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ದಿನಾಂಕ 10.03.2021ರವರೆಗೆ ವಿಸ್ತರಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.
8. ಕ್ಯಾಂಪಸ್ ಮ್ಯಾನೇಜ್‌ಮೆಂಟ್ ಸಂಸ್ಥೆಗೆ ವಿದ್ಯಾರ್ಥಿ ಪ್ರವೇಶ ಪ್ರಕ್ರಿಯೆ ಕೆಲಸ ಆರಂಭಿಸಲು ತಿಳಿಸಿದರೂ, ಕೆಲಸ ಆರಂಭ ಮಾಡದಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು.

ಮಾನ್ಯ ಕುಲಪತಿಗಳು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಕುಲಸಚಿವರು

ಸಹಿ/-
ಕುಲಪತಿಗಳು.